# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.324-2018** **ಪಿ. ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಡಿ.ಕೆ.ಬಸವಣ್ಣ<br>ದೇವನೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 12-07-2024. |

**ಪಾಟೀ ಸವಾಲುಃ ಪ್ರತಿವಾದಿಗಳ ಪರ  ಶ್ರೀ ಎಸ್.ಬಿ.ಸಿ  ವಕೀಲರಿಂದಃ**

ನಾನು ದೇವನೂರು ಗ್ರಾಮದ ವಾಸಿ. ನನಗೆ ವಾದಿಗಳು ಮತ್ತು ಪ್ರತಿವಾದಿಗಳು ಗೊತ್ತು. ನಮ್ಮ ಮನೆಗೂ, ವಾದಿಗಳು ಮತ್ತು ಪ್ರತಿವಾದಿಗಳ ಮನೆಗೂ ಸುಮಾರು 300 ಮೀಟರ್ ಅಂತರ ಇರುತ್ತದೆ. ನಾನು ಗೌರಮ್ಮ ರವರ ಮನೆಯನ್ನು ನೋಡಿರುತ್ತೇನೆ. ಸಾಕ್ಷಿಗೆ ನಿಡಿ-2 ಮತ್ತು 4 ಅನ್ನು ತೋರಿಸಿ ಸದರಿ ಪೋಟೋಗಳಲ್ಲಿ ಕಾಣುತ್ತಿರುವ ಮನೆ ಗೌರಮ್ಮನದ್ದೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-4 ಮತ್ತು 5 ರ  ಪೋಟೋಗಳನ್ನು ತೋರಿಸಿ ಸದರಿ ಪೋಟೋಗಳಲ್ಲಿ ಕಾಣುತ್ತಿರುವ ರಸ್ತೆಯ ಅಕ್ಕ-ಪಕ್ಕದಲ್ಲಿ ನೀವು ವಾಸವಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-2 ಮತ್ತು 3 ರ ಪೋಟೋಗಳಲ್ಲಿ ತೋರಿಸಿ ಸದರಿ ಪೋಟೋಗಳಲ್ಲಿ ಕಾಣುತ್ತಿರುವ ರಸ್ತೆಯ ಅಕ್ಕ-ಪಕ್ಕದಲ್ಲಿ ನೀವು ವಾಸವಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-2,4 ಮತ್ತು 5 ರಲ್ಲಿ ರ ನಪೋಟೋಗಳನ್ನು ತೋರಿಸಿ ಸದರಿ ಪೋಟೋಗಳಲ್ಲಿ ಕಾಣುತ್ತಿರುವ ಮನೆ ಯಾರಿಗೆ ಸೇರಿದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-5 ಪೋಟೋವನ್ನು ತೋರಿಸಿ ನಿಡಿ-5 ರಲ್ಲಿ ಕಾಣುತ್ತಿರುವ

ಕಾಂಪೌಂಡ್ ಯಾರದ್ದು ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿ ಗುರುಸಿದ್ಧಪ್ಪನವರದ್ದು ಎಂದುದ ನುಡಿಯುತ್ತಾರೆ.

2. ವಾದಿಯವರು ಕಟ್ಟಿರುವ ಮನೆಗೂ, ಪೋಟೋಗಳಲ್ಲಿ ಕಾಣುತ್ತಿರುವ ಮನೆಗೂ ಎಷ್ಟು ದೂರ ಎಂಬ ಪ್ರಶ್ನೆಗೆ ಸಾಕ್ಷಿ ಅಕ್ಕ–ಪಕ್ಕದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ–2 ರಿಂದ 5 ರ ಪೋಟೋಗಳಲ್ಲಿ ಗೌರಮ್ಮ ರವರ ಮನೆ ಕಾಣುತ್ತಿಲ್ಲ, ಗೌರಮ್ಮ ರವರ ಮನೆಯೂ ನಿಡಿ–2 ರಿಂದ 5 ರಲ್ಲಿ ಕಾಣುತ್ತಿರುವ ಮನೆಯ ಪಶ್ಚಿಮ ದಿಕ್ಕಿಗೆ ಬರುತ್ತದೆ. ನಿಡಿ–2 ಮತ್ತು 4 ರಲ್ಲಿ ಕಾಣುತ್ತಿರುವ ಮನೆಯನ್ನು ನಾನು ನಮ್ಮ ಊರಿನಲ್ಲಿ ನೋಡಿರುತ್ತೇನೆ. ನಿಡಿ–4 ಮತ್ತು 5 ರಲ್ಲಿ ಕಾಣುತ್ತಿರುವ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಾರೆ ಎಂದರೆ ಸರಿ. ನಿಡಿ–5 ರಲ್ಲಿ ಕಾಣುತ್ತಿರುವ ರಸ್ತೆಯಲ್ಲಿ, ಆ ರಸ್ತೆಯ ಕೊನೆಯವರೆವಿಗೆ ಇರುವ ಮನೆಯವರೆಲ್ಲರು ಓಡಾಡುತ್ತಾರೆ ಎಂದರೆ ಸರಿ. ನಿಡಿ–5 ರ ಪೋಟೋದಲ್ಲಿ ಕಾಣುತ್ತಿರುವ ಪ್ಲೆಕ್ಸ್ ಇರುವ ಜಾಗವು ಪಂಚಾಯ್ತಿ ಎಂದರೆ ಸರಿ. ನಿಡಿ–5 ರಲ್ಲಿ ಕಾಣುತ್ತಿರುವ ರಸ್ತೆಯ ಪಂಚಾಯ್ತಿಯ ಎದುರಿಗೆ ಇರುವ ರಸ್ತೆ ಆಗಿರುತ್ತದೆ ಎಂದರೆ ಸರಿ.

3. ನಾನು ವಾದಿಗಳ ಮನೆಯ ದಾಖಲೆಗಳನ್ನು ನೋಡಿರುವುದಿಲ್ಲ. ವಾದಿಗಳಿಗೆ ಎಷ್ಟು ಅಡಿ ಜಾಗವಿರುತದ್ದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿಗಳು ಮತ್ತು ಪ್ರತಿವಾದಿಗಳ ಮನೆಗಳ ನಡುವೆ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿ ಚಿಕ್ಕಸಿದ್ದಪ್ಪನವರ ಮನೆಯನ್ನು ನೋಡಿರುತ್ತೇನೆ. 1 ನೇ ಪ್ರತಿವಾದಿ ಚಿಕ್ಕಸಿದ್ದಪ್ಪನವರ ಮನೆಯಿಂದ 1 ನೇ ವಾದಿ ಗೌರಮ್ಮ ರವರ ಮನೆಗೆ ಎಷ್ಟು ಅಂತರ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಚಿಕ್ಕಸಿದ್ದಪ್ಪನವರ ಮನೆಯ ಉತ್ತರಕ್ಕೆ ಗೌರಮ್ಮ ನವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ–2 ರ ಪೋಟೋವನ್ನು ತೋರಿಸಿ ಚಿಕ್ಕಸಿದ್ದಪ್ಪನವರ ನವರ ಮನೆ ಎಲ್ಲಿ ಬರುತ್ತದೆ ಎಂಬ ಪ್ರಶ್ನೆಗೆ ಹಿಂಭಾಗದಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ–2 ರ

ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಕಾಣುತ್ತಿರುವ ರಸ್ತೆಯಲ್ಲಿ 1 ನೇ ಪ್ರತಿವಾದಿ ಓಡಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಪಕ್ಕದಲ್ಲಿ ಪಂಚಾಯ್ತಿಯವರು ಮೋರಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮೋರಿಯು ಸಾರ್ವಜನಿಕ ಮೋರಿ ಎಂದರೆ ಸರಿ. ಸಾಕ್ಷಿಗೆ ನಿಡಿ–4 ರ ಪೋಟೋವನ್ನು ತೋರಿಸಿ ನಿಡಿ–4 ರಲ್ಲಿ ಕಾಣುತ್ತಿರುವ ಮೋರಿಯು ಪಂಚಾಯ್ತಿಯವರು ಮಾಡಿರುವ ಸಾರ್ವಜನಿಕ ಮೋರಿ ಎಂದರೆ ಸರಿ.

4. ನಾನು ವ್ಯವಸಾಯ ಮಾಡುತ್ತೇನೆ. ಸಾಮಾನ್ಯವಾಗಿ ಪಂಚಾಯ್ತಿಯವರು ಖಾಸಗಿ ಸ್ವತ್ತಿನಲ್ಲಿ ಯಾವುದೇ ಕೆಲಸವನ್ನು ಮಾಡುವುದಿಲ್ಲ ಎಂದರೆ ಸರಿ. ಪಂಚಾಯ್ತಿಯವರು 1 ನೇ ವಾದಿಯವರಿಗೆ ಮನೆಯನ್ನು ಕಟ್ಟಲು ಎಷ್ಟು ಅಡಿ ಸ್ವತ್ತಿಗೆ ನಮೂನೆ–11(ಬಿ) ಅನ್ನು ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಆದರೆ ಪಂಚಾಯ್ತಿಯವರು 1 ನೇ ವಾದಿಯವರಿಗೆ ನಮೂನೆ–11(ಬಿ) ಎಂದು ಅನ್ನು 1 ನೇ ವಾದಿಯವರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ವಾದಿಯವರಿಗೆ ಒಟ್ಟು ಎಷ್ಟು ಅಡಿ ಸ್ವತ್ತು ಇದೆ ಎಂದು ಗೊತ್ತಿಲ್ಲ, ಆದರೆ 0.3 ಗುಂಟೆ ಸ್ವತ್ತು ಇರುತ್ತದೆ. 1 ನೇ ವಾದಿಯವರಿಗೆ 0.3 ಗುಂಟೆ ಸ್ವತ್ತು ಇದೆ ಎಂಬುದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಸಾರ್ವಜನಿಕ ರಸ್ತೆಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ನಿಡಿ–5 ರ ಪೋಟೋವನ್ನು ತೋರಿಸಿ ನಿಡಿ–5 ರಲ್ಲಿ ಕಾಣುತ್ತಿರುವ ಮನೆಗಳಿಗೂ ರಸ್ತೆಗೂ ವಾದಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ–5 ರಲ್ಲಿ ಕಾಣುತ್ತಿರುವ ರಸ್ತೆಗೂ ವಾದಿಗಳಿಗೂ ಏನು ಸಂಬಂಧ ಎಂಬ ಪ್ರಶ್ನೆಗೆ ಸಾಕ್ಷಿ ವಾದಿಗಳು ಸ್ವ–ಇಚ್ಛೆಯಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಆ ರಸ್ತೆಯನ್ನು ಬಿಟ್ಟಿದ್ದು, ಅವರು ಯಾವಾಗಾ ಬೇಕಾದರೂ ಅದನ್ನು ಸ್ವಾಧೀನಪಡಿಸಿಕೊಳ್ಳಬಹುದು ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ವಾದಿಗಳು ಪಂಚಾಯ್ತಿಯವರಿಗೆ ಬಿಟ್ಟುಕೊಟ್ಟಿರುವುದಿಲ್ಲ. ಸದರಿ ರಸ್ತೆ ಕಾಣುತ್ತಿರುವ ಜಾಗದಲ್ಲಿ ವಾದಿಯವರಿಗೆ ಸೇರಿದ

ಮನೆ ಇದ್ದು, ಅದನ್ನು ಈಗ ಹೊಡೆದುಹಾಕಿದ್ದು ಈಗ ಅವರ ಖಾಲಿ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಗೌರಮ್ಮ ನವರ ಮನೆ ಇದೆ ಎಂದು ನನ್ನ ಸಾಕ್ಷ್ಯಕ್ಕೆ ವಿರುದ್ಧವಾಗಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**